# ಕೆಂಪು ಬೆಲ್ಲ ಮತ್ತು ಕಟ್ಟಿರುವೆಗಳು

ಆಲೂರು ದೊಡ್ಡನಿಂಗಪ್ಪ
ಕಲೆ: ಈಶ್ವರ ಬಡಿಗೇರ



ಮಗ ಗೌತಮನನ್ನು ಕಿಟ್ಟಪ್ಪ ಹೆಗಲ ಮೇಲೆ ಕೂರಿಸಿಕೊಂಡು ಕೈಯಲ್ಲಿ ಬ್ಯಾಗು ಹಿಡಿದು ಆಗಾಗ ದಾರಿ ಹಿಂದಕ್ಕೆ ತಿರುಗಿ ತಿರುಗಿ ನೋಡುತ್ತಿದ್ದ. ನೆತ್ತಿಯ ಮೇಲಿನ ಬಿಸಿಲು ದಟ್ಟವಾಗುತ್ತಿತ್ತು. ಹೆಂಡತಿ ಬಾಗಿಯನ್ನು 'ಬಾ ಬೇಗ ಬೇಗ, ಅಂಗೆ ಹೆಜ್ಜೆ ಮಡಗ್ತಿಯ' ಎಂದ ಕಿಟ್ಟಪ್ಪ. ತನ್ನ ಹೆಜ್ಜೆಯ ಮೇಲೆಯೇ ಗಂಡನ ಕಣ್ಣುಗಳು ಲೀನವಾಗಿರುವುದನ್ನು ಕಂಡ ಬಾಗಿ ಹುಸಿ ನಗೆ ನಕ್ಕು, 'ಅಯ್ಯೋ, ಯಾರೂ ಕಾಣ್ದವ ನೀನು ತಂದು ನನ್ನ ಕಾಲಿಗೆ ತೊಡಿಸಿದ್ದೀಯ ನೋಡು, ಅದಕ್ಕೇ ನಿನಗೆ ದಾರಿ ಮೇಲೆ ನಿಗಾ ಇಲ್ಲ. ನನ್ನ ಹೆಜ್ಜೆ ಮೇಲೇ ನಿನಗೆ ನಿಗಾ' ಎಂದು ನಕ್ಸಾರ ಮಾಡಿ ಅತ್ತ ಬೇಲಿಗೆ ಮತ್ತೆ ನಕ್ಕಳು.

ಹೆಂಡ್ತಿ ಹೊಲ–ಮನೆಗೆ ಹೋದಾಗ ಬರಿಗಾಲಲ್ಲಿ ನಡೆಯೋದ ಕಂಡ ಕಿಟ್ಟಪ್ಪ 'ನಾನಾಗ್ದೆ ಇದಕ್ಕೆ ಯಾರಾಗ್ತಾರೆ ಪಾಪುದ್ದು. ಎಲ್ಲಾ ಬಿಟ್ಟು ನನ್ನೇ ನಂಬಿ ಬಂದೈತೆ. ಕಲ್ಲು ಅನ್ನಲ್ಲ, ಮುಳ್ಳು ಅನ್ನಲ್ಲ. ಬರಿಗಾಲಲ್ಲೇ ಎಲ್ಲದರ ಮೇಲೂ ಹೆಜ್ಜೆ ಇಡುತ್ತೆ' ಅಂದುಕೊಂಡು ಕರುಳು ಚುರುಕ್ ಅಂದು, ಪೇಟೆಗೆ ಹೋದಾಗ ಒಂದು ಜೊತೆ ಜೋಡು ತಂದು ಕಾಲಿಗೆ ತೊಡಿಸಿ ಖುಷಿಪಟ್ಟಿದ್ದ. ಅಳತೆ ಕುಲ ಇಲ್ಲದ ಆ ಜೋಡು ಮೆಟ್ಟಿಕೊಂಡು ಬೇಗ ಬೇಗ ನಡೆಯೋಕ್ಕಾಗದೆ ಬಾಗಿ ವಸಿ ದೂರ ಕೈಯಲ್ಲೇ ಯಕ್ಡ ಹಿಡ್ಕಂಡು ಬರದು, ವಸಿ ದೂರ ಕಾಲಲ್ಲಿ ಮೆಟ್ಕಂಡು ನಡೆಯೋದು ಮಾಡ್ತಿದ್ಲು. ಇದನ್ನೆಲ್ಲ ನೋಡಿದ ಕಿಟ್ಟಪ್ಪ 'ಜೋಡು ಕೊಟ್ಟವನು ಒಳ್ಳೆ ಮನ್ಸ, ನಿಮ್ಮ ಹೆಂಡ್ತಿಗೆ ಜೋಡು ಸರಿಯಾಗಲಿಲ್ಲ ಅಂದರೆ ಬದಲಿಸಿ ಕೊಡುತ್ತೇನೆ ಎಂದು ಹೇಳಿದ್ದಾನೆ. ನೀನೇನೂ ಚಿಂತೆ ಮಾಡಬೇಡ. ಕೈಯಲ್ಲಿ ಯಾಕೆ ಹಿಡಿತೀ, ಕಾಲಿಗೆ ಮೆಟ್ಕೊಂಡ್ ಬಾ' ಅಂದ.

ಬಾಗಿ ಮನಸಿಗೆ ದಾರಿ ಉದ್ದಕ್ಕೂ ನನ್ನ ಗಂಡ ಚೌಕಿದಾರ ಅಲ್ಲ ಅನಿಸುತ್ತಲೇ ಇತ್ತು. 'ಪಾಪ, ಸಣ್ಣ ಹೊಲ ಮನೆ. ದುಡಿಮೆ ಇಲ್ಲ, ಅವನು ತಾನೆ ಏನು ಮಾಡ್ತನೆ? ನನಗೆ ಅವ್ವ ಇದ್ದಿದ್ರೆ ಇಷ್ಟೆಲ್ಲಾ ನೋಡಿ ಸುಮ್ಕಿರ್ತಿದ್ಲಾ? ಅಣ್ಣಂದಿರಿಗೇನಾರ ಹೇಳಿ ಸೇರ್ರೊಳ್ಳಕ್ಕೆ ಯಂತದ್ದಾರ ಒಂದು ಗೂಡನ್ನಾದರೂ ಮಾಡ್ಕೊಡ್ತಿದ್ಲು. ಎಲ್ಲ ನಮ್ಮ ಕರ್ಮ. ಇಂಥದ್ದೆಲ್ಲ ಕೇಳಿ ಪಡ್ಕಂಡ್ ಬಂದಿರಬೇಕು. ಯಾರನ್ನಂದು ಆಡಿದರೆ ಈಗೇನು ಬಂತು?' ಎಂದುಕೊಳ್ಳುತ್ತ ಆ ಪಾದಗಳಿಗೆ ಬಿಗಿಯಾಗುವ ಜೋಡು ಮೆಟ್ಟಿಕೊಂಡೇ ಹೆಜ್ಜೆ ಹಾಕುತ್ತಿದ್ದಳು.

ಹೆಂಡ್ತಿ ಹೆಜ್ಜೆ ಹಾಕೋದ ನೋಡಿದ ಕಿಟ್ಟಪ್ಪ 'ನಾಳೆ ಬದಲಾಯಿಸ್ತೀನಿ, ಸಡಿಲವಾಗಿರೋ ಜೋಡು ತಂದು ಕಾಲಿಗೆ ತೊಡಿಸ್ತೀನಿ' ಅಂದುಕೊಂಡು ಹೊತ್ತುಕೊಂಡಿದ್ದ ಮಗನನ್ನು ಹೆಗಲಿಂದ ಹೆಗಲಿಗೆ ಬದಲಿಸಿಕೊಂಡ. ಮಗ ಆಗಾಗ ಆಡುವ ಮಾತು, ಕೇಳುವ ಪ್ರಶ್ನೆಗೆ ಸಾಧ್ಯವಾದಷ್ಟು ಉತ್ತರಿಸುತ್ತಿದ್ದ. ಹಾರುವ ಹಕ್ಕಿ ಪಕ್ಷಿಗಳ ಕಂಡು 'ನಮಗ್ಯಾಕೆ ಎತ್ತರಕ್ಕೆ ಹಾರಕ್ಕಾಗ್ತಿಲ್ಲ?' ಎಂದು ಮಗ ಕೇಳಿದ ಪ್ರಶ್ನೆಗೆ 'ಎಲಾ ಎಂಥಾ ಪ್ರಶ್ನೆ' ಎಂದು ಕಿಟ್ಟಪ್ಪನಿಗನ್ನಿಸಿತು. ಕ್ಷಣ ಹೊತ್ತು ಮೌನವಾದ.

ಹೆಗಲ ಮೇಲೆ ಕುಳಿತ ಮಗ 'ಅಪ್ಪಾ ಹೇಳಪ್ಪಾ, ಅಪ್ಪಾ ಹೇಳು' ಎಂದು ಕಿಟ್ಟಪ್ಪನ ಜುಟ್ಟು ಹಿಡಿದು ಅಲ್ಲಾಡಿಸಿದ. ಮಗನ ಪ್ರಶ್ನೆಯಿಂದಾಗಿ ಕಿಟ್ಟಪ್ಪನಿಗೆ ಹಿಂದಿನ ಕಷ್ಟಗಳೆಲ್ಲ ನೆನಪಿಗೆ ಬಂದು ಸಂಕಟವಾಯಿತಾದರೂ, ಆ ಭಾರವಾದ ದನಿಯಲ್ಲಿ 'ನಮಗಿನ್ನೂ ರೆಕ್ಕೆ ಬಲಿತಿಲ್ಲ ಕಣಪ್ಪ' ಎನ್ನುತ್ತಾ ಹೆಜ್ಜೆ ಹಾಕಿದ. ಮಾಳದಲ್ಲಿ ಹಸ ಕರ ಮೇಯಿಸುತ್ತಿದ್ದ ಕೃಷ್ಣ ನಾಯಕ 'ಲೇ ಮರಿ ಕೆಳಕ್ಕಿಳಿಲ, ಆಗ ಹಾರೋದು ಬರುತ್ತೆ' ಎಂದು ಕೂಗಿ ರಾಗಿ ಪೈರಿಗೆ ಬಾಯಾಕಿದ ಕರುವ ಕಂಡು 'ಹೇ' ಎಂದು ಅದ್ದಲಿಸಿ ಹಗ್ಗ ಜಗ್ಗಿದ. ಕೃಷ್ಣ ನಾಯಕನ ದನಿಗೆ ಹೆದರಿದ ಮಗ 'ಅಪ್ಪಾ, ನಾನೂ ನಡಿತಿನಿ' ಎಂದು ಅಂಗಲಾಚಿದ. ಕಿಟ್ಟಪ್ಪ 'ಬ್ಯಾಡ ಸುಮ್ಕಿರು, ಎಲ್ಗಾರ, ಎಂತವಾರ ಚುಚ್ಚಿದರೆ ಏನು ಮಾಡ್ತಿ' ಎಂದು ಆ ಕಾಲುಗಳನ್ನು ನೇವರಿಸಿ ಹೆಗಲ ಬದಲಿಸಿಕೊಂಡು ಬಿರಬಿರನೆ ನಡೆದ.

ದಾರಿಯಲ್ಲಿ ಎದುರು ಸಿಕ್ಕ ಹರಿಸಮುದ್ರದ ಸೋಮಣ್ಣ 'ಏನ್ ಕಿಟ್ಟಪ್ಪ, ಸಂಸಾರ ಹೊಸ್ದಾ? ಇವ್ರ ತೌರ್ ಮನೆ ಎಲ್ಲಿದು?' ಎಂದು ಕೇಳಿದ. ಹೊಸ ಚಪ್ಪಲಿ ಮೆಟ್ಟಿಕೊಂಡು ರಸ್ತೇಲಿ ನಡೆದು